ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ____

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : ____

# ಸಂದೇಶ ಸೃಷ್ಟಿಸಿದ ಸಂಘರ್ಷ

- ವಿಭಿನ್ನ ಚರ್ಚೆಗೆ ದಾರಿ ಮಾಡಿಕೊಟ್ಟ ರಾಜ್ಯಪಾಲರ ಸಂದೇಶ
- ನಿಲುವು ತಿಳಿಸದ ಸ್ಪೀಕರ್

**ವಿಕ ಸುದ್ದಿಲೋಕ** ಬೆಂಗಳೂರು

ವಿಶ್ವಾಸಮತ ಯಾಚನೆ ಪ್ರಕ್ರಿಯೆಯನ್ನು ಗುರುವಾರವೇ ಪೂರ್ಣಗೊಳಿಸುವಂತೆ ರಾಜ್ಯಪಾಲರು ಸ್ಪೀಕರ್‌ಗೆ ಸಂದೇಶ ಕಳಿಸಿರುವುದು ವಿಭಿನ್ನ ಚರ್ಚೆಗೆ ಆಸ್ಪದ ಕಲ್ಪಿಸಿದೆ.

ಭೋಜನಾ ನಂತರ ಕಲಾಪದಲ್ಲಿ ರಾಜ್ಯಪಾಲರ ಸಂದೇಶವನ್ನು ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ಸದನದ ಗಮನಕ್ಕೆ ತಂದರು. "ಮುಖ್ಯಮಂತ್ರಿ ಅವರು ಮಂಡಿಸಿರುವ ವಿಶ್ವಾಸಮತ ಯಾಚನೆ ಪ್ರಕ್ರಿಯೆಯನ್ನು ದಿನದ ಅಂತ್ಯದೊಳಗೆ ಪೂರ್ಣಗೊಳಿಸಬೇಕು. ಹಾಗೆ ಮಾಡುವುದು ಪ್ರಜಾಪ್ರಭುತ್ವ ಮತ್ತು ಸಂಸದೀಯ ವ್ಯವಸ್ಥೆಯಲ್ಲಿ ಉತ್ತಮ ಸಂಪ್ರದಾಯವಾಗುತ್ತದೆ," ಎನ್ನುವುದು ರಾಜ್ಯಪಾಲರ ಸಂದೇಶದ ಸಾರಾಂಶ. ಇದು ಸಂದೇಶವಷ್ಟೆ. ಯಾವುದೇ ನಿರ್ದೇಶನವಲ್ಲವೆಂದು ಪ್ರಾರಂಭದಲ್ಲೆ ಸ್ಪೀಕರ್ ಸ್ಪಷ್ಟಪಡಿಸಿದರು.

"ಬಿಜೆಪಿಯವರು ಬೆಳಗಿನಿಂದ ಏನನ್ನು ಆಗ್ರಹಿಸುತ್ತಿದ್ದಾರೋ ಅದೇ ಅಂಶ ರಾಜ್ಯಪಾಲರ ಸಂದೇಶದಲ್ಲಿದೆ. ಇದು ಕಾಕತಾಳೀಯವೋ ಅಥವಾ ಬಿಜೆಪಿಯವರು ರಾಜಭವನಕ್ಕೆ ಹೋಗಿ ಬಂದಿದ್ದಾರಾ?" ಎಂದು ಸಚಿವ ಕೃಷ್ಣ ಬೈರೇಗೌಡ ಪ್ರಶ್ನಿಸಿದರು. ರಾಜಭವನಕ್ಕೆ ಭೇಟಿ ನೀಡಿ ಮನವಿ ಸಲ್ಲಿಸಲಾಗಿದೆಯೆಂದು ಪ್ರತಿಪಕ್ಷದ ಜಗದೀಶ ಶೆಟ್ಟರ್ ಮತ್ತು ಕೆ.ಎಸ್. ಈಶ್ವರಪ್ಪ ಹೇಳಿದರು. ರಾಜಭವನಕ್ಕೆ ಹೋಗಿ ದೂರು ನೀಡುವುದು ಪ್ರತಿಪಕ್ಷದ ಹಕ್ಕು. ಆದರೆ, ರಾಜ್ಯಪಾಲರು ಹೀಗೆ ಸಂದೇಶ ನೀಡುವಂತಿಲ್ಲ, ಸದನದ ಕಾರ್ಯಕಲಾಪದಲ್ಲಿ ಅವರ ಹಸ್ತಕ್ಷೇಪವಾಗಕೂಡದು ಎಂದು ಆಡಳಿತ ಪಕ್ಷದ ಎಚ್.ಕೆ.ಪಾಟೀಲ್ ಆಕ್ಷೇಪಿಸಿದರು. ಸಚಿವ ಆರ್.ವಿ.ದೇಶಪಾಂಡೆ ಅವರೂ ರಾಜ್ಯಪಾಲರು ಇಂಥ ಸಂದೇಶ ನೀಡುವಂತಿಲ್ಲವೆಂದರು.

**ಸಂದೇಶ ಕಳುಹಿಸಬಹುದು ಎಂದ ಬಿಜೆಪಿ:** ರಾಜ್ಯಪಾಲರು ಸದನಕ್ಕೆ ಸಂದೇಶ ಕಳುಹಿಸಬಹುದೆಂದು ವಿಧಾನಸಭೆ ಕಾರ್ಯವಿಧಾನ ಕುರಿತ ನಿಯಮದ ಪುಸ್ತಕದಲ್ಲಿ ಇರುವುದನ್ನು ಪ್ರಸ್ತಾಪಿಸಿ ಮಾತನಾಡಿದ ಪ್ರತಿಪಕ್ಷದ ಬಸವರಾಜ ಬೊಮ್ಮಾಯಿ, "ರಾಜ್ಯಪಾಲರು ಸಂದೇಶ ಕೊಟ್ಟಾಗ ಅದರ ಮೇಲೆ ಕ್ರಮವೇನು ಎನ್ನುವುದನ್ನೂ ಸ್ಪೀಕರ್ ತಿಳಿಸಬೇಕೆಂದು ನಿಯಮದಲ್ಲಿದೆ," ಎಂದು ಹೇಳಿದರು. ಈ ಹಂತದಲ್ಲಿ ಸ್ಪೀಕರ್ ಸದನದಲ್ಲಿ ಇರಲಿಲ್ಲ. ಅವರ ಅನುಪಸ್ಥಿತಿಯಲ್ಲಿ ಡೆಪ್ಯೂಟಿ ಸ್ಪೀಕರ್ ಕೃಷ್ಣಾರೆಡ್ಡಿ ಪೀಠದಲ್ಲಿದ್ದರು. ಈ ವಿಚಾರದಲ್ಲಿ ಗದ್ದಲ, ಕೋಲಾಹಲವೂ ಆದದ್ದರಿಂದ ಡೆಪ್ಯೂಟಿ ಸ್ಪೀಕರ್ ಅವರು ಕಲಾಪವನ್ನು ಶುಕ್ರವಾರಕ್ಕೆ ಮುಂದೂಡಿದರು.

[illegible]

ಅಗತ್ಯವೆನಿಸಿದರೆ ರಾತ್ರಿ 12 ಗಂಟೆವರೆಗೂ ಕಲಾಪ ನಡೆಸಿ ಮತಕ್ಕೆ ಹಾಕಬಹುದು. ಸಿಎಂ ಅವರೂ ಮಾತು ಮುಂದುವರಿಸಬಹುದು. ಪ್ರತಿಪಕ್ಷದ ಕಡೆಯಿಂದಲೂ ಮಾತನಾಡಲಾಗುವುದು ಎಂದು ರಾಜ್ಯಪಾಲರ ಸಂದೇಶ ಬಂದ ಬಳಿಕ ಪ್ರತಿಪಕ್ಷದ ನಾಯಕ ಬಿ.ಎಸ್. ಯಡಿಯೂರಪ್ಪ ಸಲಹೆ ನೀಡಿದರು.



2